ನೀವು ಮಾಡಲಾರದ ಕೆಲಸ ನಾನು ಮಾಡಿ ಜಾಗ ಬಿಡಿಸಿಕೊಟ್ಟೆ. ಈಗ ಸರ್ಕಾರ ಮಂಜೂರಾತಿ ಕೊಟ್ಟಿದೆ. ಇದು ಕೆಎಸ್‌ಡಬ್ಲ್ಯೂ ಯೋಜನೆಯಡಿ ಬರುವುದರಿಂದ ಈಗಾಗಲೇ ಜರ್ಮನ್ನಿನ ಕೆಎಸ್‌ಡಬ್ಲ್ಯೂ ಆಫೀಸಿಗೆ ಕಳಿಸಿದೆ. ಅದು ಮಂಜೂರಾಗಿ ಬಂದತಕ್ಷಣ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ರಾಜೇಂದ್ರವರ್ಮ (ಹುಲಸೂರು) : ಅಧ್ಯಕ್ಷರೆ, ಸಚಿವರು ನಮ್ಮ ಜಿಲ್ಲೆ ಉಸ್ತುವಾರಿ ಸಚಿವರೂ ಆಗಿದ್ದಾರೆ. ಒಂದು ವರ್ಷವಾಯಿತು, ನಮ್ಮ ಶಾಸಕಮಿತ್ರರು ಹೇಳಿದಂತೆ ಯಾವುದೇ ಒಂದು ಕೆಲಸ ಇಲ್ಲಿಯವರೆಗೆ ಜಾರಿಗೆ ಬರಲಿಲ್ಲ. ಪದೇಪದೇ ಆಸ್ಪತ್ರೆ, ಡಾಕ್ಟರು ಬಗ್ಗೆ ನಾನು ಸಾಕಷ್ಟು ಚರ್ಚೆ ಮಾಡಿದ್ದೇನೆ. ಅವರೂ ವೈದ್ಯರಿದ್ದಾರೆ, ಆರೋಗ್ಯದ ಬಗ್ಗೆ ಎಷ್ಟು ಕಾಳಜಿ ಇರಬೇಕೆಂದು ಅವರಿಗೆ ಗೊತ್ತಿರಬೇಕು. ಆದರೂ ನಮ್ಮ ಹುಲಸೂರು ಆಸ್ಪತ್ರೆಯಲ್ಲಿ ಒಬ್ಬ ಲೇಡಿ ಡಾಕ್ಟರಿದ್ದಾರೆ, ಅವರಿಗೆ ಡೆಪ್ಯುಟೇಶನ್ ಕೊಟ್ಟಿದ್ದಾರೆ. ಇಲ್ಲಿಯವರಿಗೆ ಆ ಡೆಪ್ಯುಟೇಶನ್ ಕ್ಯಾನ್ಸೆಲ್ ಮಾಡಿಸಲು ಹೇಳಲು ಆಗಿಲ್ಲ. ಅಮೇಲೆ ನಮ್ಮಲ್ಲಿ ಮೂರು ಕಟ್ಟಡಗಳಿವೆ. ಆ ಮೂರು ವೇಸ್ಟಾಗಿವೆ. ವೆಹಿಕಲ್ಸ್ ಇಲ್ಲ. ಹೀಗಾದರೆ ಜನರ ಗತಿಯೇನು?

ಅಧ್ಯಕ್ಷರು : ನೋಡಿ ಮಾಲಕರೆಡ್ಡಿಯವರೇ ನೀವು ಇನ್‌ಚಾರ್ಜ್ ಮಿನಿಸ್ಟ್ರು ಹೀಗೆ ಮಾಡಿದರೆ ಹೇಗೆ?

ಡಾ|| ಎ.ಬಿ. ಮಾಲಕರೆಡ್ಡಿ : ಅಧ್ಯಕ್ಷರೆ, ಸರ್ಕಾರ 573 ಮಂದಿಯನ್ನು ನೇಮಕ ಮಾಡಿದೆ. ಅವರು ಹೋಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಲಿಲ್ಲವೆಂದರೆ ನಾನು ಏನು ಮಾಡಲು ಆಗುತ್ತದೆ?

ಶ್ರೀ ರಾಜೇಂದ್ರವರ್ಮ : ಇದ್ದ ವ್ಯವಸ್ಥೆಯಲ್ಲೇ ಗುಣಮಟ್ಟದ್ದು ಮಾಡಿರಿ ಎಂದು ಹೇಳುತ್ತಿದ್ದೇನೆ. ದಡ್ಡರನ್ನು ತಂದುಹಾಕ್ರಿ ಎಂದು ಹೇಳುತ್ತಿಲ್ಲ. ಇದ್ದವರನ್ನು ವರ್ಗ ಮಾಡಿ ಬಿಟ್ಟರೆ ಜನರ ಗತಿಯೇನು ಎಂದು ಕೇಳುತ್ತಿದ್ದೇನೆ ಅಷ್ಟೇ. ಹೊಸದಾಗಿ ಮಾಡುವುದು ನಿಮಗೆ, ಮತ್ತು ನಿಮ್ಮ ಸರ್ಕಾರಕ್ಕೆ ಬಿಟ್ಟ ಮಾತು. ಅದನ್ನು ನಾನು ಕೇಳುತ್ತಿಲ್ಲ. ನೀವು ಜಿಲ್ಲಾ ಉಸ್ತುವಾರಿ ಸಚಿವರಾಗಿ ಇಲ್ಲಿಯವರೆಗೆ ನಿಮ್ಮ ಇಲಾಖೆ ವತಿಯಿಂದ ಯಾವ ಕೆಲಸ ಮಾಡಿದ್ದೀರಿ?

ಅಧ್ಯಕ್ಷರು : ಬೇಡ, ಆ ಪ್ರಶ್ನೆ ಇಲ್ಲಿ ಕೇಳಬಾರದು. ಡಾಕ್ಟರಂತೆ ಬೇಗನೆ ಹಾಕಿ ಕೊಡಿಯಪ್ಪ ಅವರಿಗೆ. ನಮ್ಮ ತಾಲ್ಲೂಕಿನಲ್ಲೂ 6 ವೈದ್ಯರಿಲ್ಲ, ಸ್ವಲ್ಪ ಬೇಗ ರಿಕ್ರೂಟ್ ಮಾಡಿ.

ಡಾ|| ಎ.ಬಿ. ಮಾಲಕರೆಡ್ಡಿ : ಬೇಗನೆ ಮಾಡುತ್ತೇವೆ.

ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ

411 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪೂರ್ಣ ಪ್ರಮಾಣದ ಕಾಲೇಜುಗಳಿಗೆ?

ಅ) ಎಷ್ಟು ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ ಇದೆ?

ಆ) ಎಷ್ಟು ಕಾಲೇಜುಗಳಿಗೆ ಸ್ವಂತ ಕಟ್ಟಡಗಳಿವೆ? ಹಾಗೂ ಎಷ್ಟು ಕಾಲೇಜುಗಳಿಗೆ ಕಟ್ಟಡಗಳ ಕೊರತೆ ಇದೆ?

ಈ) ಕಾಪು ಕ್ಷೇತ್ರದ ಸರ್ಕಾರಿ ಪೂರ್ಣ ಪ್ರಮಾಣದ ಕಾಲೇಜಿನಲ್ಲಿ ಎಷ್ಟು ಅಧ್ಯಾಪಕರ ಕೊರತೆ ಕಂಡು ಬಂದಿದೆ?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ 152 ಪೂರ್ಣ ಪ್ರಮಾಣದ ಕಾಲೇಜುಗಳಿವೆ.

ಆ) ಕೆಲವೊಂದು ಕಾಲೇಜುಗಳಲ್ಲಿ ಕೊರತೆಗಳಿವೆ.

ಇ) 91 ಕಾಲೇಜುಗಳಿಗೆ ಸ್ವಂತ ಕಟ್ಟಡಗಳು ಇವೆ.
61 ಕಾಲೇಜುಗಳಿಗೆ ಕಟ್ಟಡಗಳ ಕೊರತೆ ಇದೆ.

ಈ) ವಾಣಿಜ್ಯಶಾಸ್ತ್ರದ ವಿಷಯದಲ್ಲಿ 03 ಉಪನ್ಯಾಸಕರ ಕೊರತೆ ಮಾತ್ರ ಕಂಡು ಬಂದಿದೆ.

ಶ್ರೀ ವಸಂತ ವಿ. ಸಾಲಿಯಾನ : ಅಧ್ಯಕ್ಷರೆ, ನಾನು ನಿರ್ದಿಷ್ಟವಾಗಿ ಸಚಿವರನ್ನು ಕೇಳುತ್ತೇನೆ. ರಾಜ್ಯದಲ್ಲಿರುವ 152 ಪೂರ್ಣಪ್ರಮಾಣದ ಕಾಲೇಜುಗಳಲ್ಲಿ ಎಷ್ಟರಲ್ಲಿ ಅಧ್ಯಾಪಕರ ಕೊರತೆ ಇದೆ? ಅದೇ ರೀತಿ 61 ಕಟ್ಟಡಗಳ ಕೊರತೆ ಇರುವುದನ್ನು ಯಾವ ರೀತಿ ನಿಭಾಯಿಸುತ್ತಾರೆ? ಈ ವರ್ಷ ಎಷ್ಟು ಹಣ ಒದಗಿಸಿಕೊಟ್ಟಿದ್ದಾರೆ? ನನ್ನ ಕ್ಷೇತ್ರದ ಪೂರ್ಣಪ್ರಮಾಣದ ಕಾಲೇಜಿನಲ್ಲಿ 3 ಕಾಮರ್ಸ್ ಲೆಕ್ಚರರ್ಸನ್ನು ನೇಮಿಸಿದ್ದರು. ಕೇವಲ ಒಂದು ವಾರದಲ್ಲಿ ಪುನಃ ಅವರನ್ನು ವರ್ಗ ಮಾಡಿಬಿಟ್ಟರು. ಆ ಮೂರು ಲೆಕ್ಚರರ್‌ಗಳನ್ನು ಯಾವಾಗ ಹಾಕುತ್ತೀರಾ?

ಡಾ॥ ಜಿ. ಪರಮೇಶ್ವರ್ : ಅಧ್ಯಕ್ಷರೆ, ರಾಜ್ಯದ 152 ಕಾಲೇಜುಗಳಲ್ಲಿ ಸುಮಾರು 692 ಹುದ್ದೆಗಳು ಖಾಲಿ ಇವೆ. ಈಗ ವಿದ್ಯಾರ್ಥಿಗಳ ಸಂಖ್ಯೆ ಕೂಡ ಡಿಗ್ರಿ ಕಾಲೇಜುಗಳಲ್ಲಿ ಕಡಿಮೆಯಾಗಿ ವರ್ಕಲೋಡನ್ನು ನಾವು ರಿ-ಅಪ್ರೊಪ್ರಿಯೇಟ್ ಮಾಡಿದ ಮೇಲೆ 364 ಹುದ್ದೆಗಳನ್ನು ತುಂಬಲು ಪ್ರಸ್ತಾವನೆ ಕಳಿಸಿಕೊಟ್ಟಿದ್ದೇವೆ. ಈಗ ಗ್ರಾಮೀಣ ಕೃಪಾಂಕದ ಗೊಂದಲದಿಂದ ನೇಮಕಾತಿ ನಿಂತಿದೆ. ಅದರ ಜೊತೆಗೆ ನಾವು ಏನು ಮಾಡಿದ್ದೇವೆಂದರೆ ಎಲ್ಲಿ ಖಾಲಿ ಇದೆ ಅಲ್ಲಿಗೆ ಖಾಸಗಿ ಸಂಸ್ಥೆಗಳಿಂದಾಗಲಿ ಬೇರೆ ಕಾಲೇಜಿನಿಂದಾಗಲೀ ರಿ-ಅಪ್ರೊಪ್ರಿಯೇಟ್ ಮಾಡಿ ಹಾಕಿಕೊಟ್ಟಿದ್ದೇವೆ. ಇವರ ಕಾಪು ಕಾಲೇಜಿನಲ್ಲಿ ಮೂರು ಕಾಮರ್ಸ್ ಲೆಕ್ಚರರ್ಸ್ ಅನ್ನು ಹಾಕಿದ ನಂತರ ಬೇರೆ ಕಾಲೇಜುಗಳಲ್ಲಿ ಕೊರತೆ ಬಂದಿದ್ದಕ್ಕಾಗಿ ಅವರನ್ನು ರಿ-ಡಿಪ್ಲಾಯ್‌ಮೆಂಟ್ ಎಂದು ಮಾಡಿ ಹಿಂದಕ್ಕೆ ತೆಗೆದುಕೊಂಡಿದ್ದೇವೆ. ಹೊಸದಾಗಿ 364 ಹುದ್ದೆಗಳ ಭರ್ತಿಯಾದ ತಕ್ಷಣ ಬಹುಶಃ ಇನ್ನೊಂದುವರೆ ತಿಂಗಳಲ್ಲಿ 364 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುತ್ತೇವೆ, ಆಗ ಖಂಡಿತ ಮಾಡಿಕೊಡುತ್ತೇವೆ. ಒಂದು ವೇಳೆ ಪಾಠ ಮಾಡಲೂ ಯಾರು ಇಲ್ಲ ಎಂದು ಬೇರೆಬೇರೆ ಕಾಲೇಜುಗಳಿಂದ ನಮಗೆ ದೂರು ಬಂದಿವೆ ಅಂತಹ ಕಡೆ ಅಲ್ಪಕಾಲಿಕ

ಟೀಚರ್ಸ್ ತೆಗೆದುಕೊಳ್ಳಲು ಈಗಾಗಲೇ ಅನುಮತಿ ನೀಡಿದ್ದೇವೆ. ಕಾಪುನಲ್ಲೂ ಆ ಪ್ರಿನ್ಸಿಪಾಲರಿಗೆ ಅನುಮತಿ ಕೊಟ್ಟಿದ್ದೇವೆ. ಇದರಿಂದ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ. ಇನ್ನು ಸುಮಾರು 61 ಕಾಲೇಜುಗಳಿಗೆ ಕಟ್ಟಡ ಕಟ್ಟಬೇಕಾಗಿದೆ. ಆದರಲ್ಲಿ 35 ಪ್ರಥಮದರ್ಜೆ ಕಾಲೇಜುಗಳ ಕಾಮಗಾರಿ ಈಗಾಗಲೇ ಪ್ರಾರಂಭಿಸಿದ್ದೇವೆ.

12-00 ಪಿಎಂ

ಅನೇಕ ವರ್ಷಗಳಿಂದ ಹಣಕಾಸಿನ ತೊಂದರೆಯಿಂದಲೂ ಕೂಡ ಇದು ನಡೆದುಕೊಂಡು ಬರುತ್ತಿದೆ. 26 ಕಾಲೇಜುಗಳಲ್ಲಿ ಕಾಲೇಜಿಗೆ ಈಗಾಗಲೇ ನಾವು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್‌ನ್ನು ಕೊಟ್ಟಿದ್ದೇವೆ. ಇನ್ನು 17 ಕಾಲೇಜುಗಳಿಗೆ ನಿವೇಶನವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದೆಲ್ಲಕ್ಕೂ ಕೂಡ ನಾವು ಕ್ರಮವನ್ನು ಜರುಗಿಸಿದ್ದೇವೆ. ಇದರ ಜೊತೆಗೆ ಹಣಕಾಸಿನ ತೊಂದರೆ ಇದೆ ಎಂದು ಹೇಳಿ ಹಾಗೆಯೇ ಕುಳಿತುಕೊಳ್ಳುವುದು ಬೇಡವೆಂದು ಹೇಳಿ ಹುಡ್ಕೋ ಲೋನನ್ನು ತೆಗೆದುಕೊಳ್ಳಬೇಕೆನ್ನುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿ ಕೊಟ್ಟಿದ್ದೇವೆ. ಸುಮಾರು 26 ಕೋಟಿ ರೂಪಾಯಿಗಳು ಇದೆಲ್ಲದಕ್ಕೂ ಕೂಡ ಬೇಕಾಗುತ್ತದೆಂದು ಹೇಳಿ ಆ ಹಂತದಲ್ಲಿದ್ದೇವೆ.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, 2000-2001 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯಾದ್ಯಂತ ಎಷ್ಟು ಪೂರ್ಣ ಪ್ರಮಾಣದ ಕಾಲೇಜುಗಳಿಗೆ ಸರ್ಕಾರ ಮಂಜೂರಾತಿಯನ್ನು ನೀಡಿದೆ? ಈಗಾಗಲೇ ನಾನು ಸರ್ಕಾರಕ್ಕೆ ಮಾನವಿಯನ್ನು ಸಲ್ಲಿಸಿದ್ದೇನೆ. ನೆಲಮಂಗಲ ಪಟ್ಟಣದಲ್ಲೂ ಸಹಾ ಪ್ರಥಮದರ್ಜೆ ಕಾಲೇಜು ಆಗಬೇಕೆಂದು ಮನವಿಯನ್ನು ಸಲ್ಲಿಸಿದ್ದೇನೆ. ಅದರ ಬಗ್ಗೆ ಮಾಹಿತಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೋರುತ್ತಿದ್ದೇನೆ.

ಡಾ|| ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ 152 ಕಾಲೇಜುಗಳಿವೆ. ಅದರ ಜೊತೆಗೆ ಅನೇಕ ತಾಲ್ಲೂಕಿನ ಹೆಡ್ ಕ್ವಾರ್ಟರ್ಸ್‌ನಲ್ಲಿ ಡಿಗ್ರಿ ಕಾಲೇಜನ್ನು ಮಾಡಬೇಕೆಂದು ಹೇಳಿ ಬೇಡಿಕೆ ಇದೆ. ಮಾನ್ಯ ಶಾಸಕರನೇಕರು ಕೂಡ ಕೇಳಿದ್ದಾರೆ. ಇಲ್ಲಿ ಜ್ಯೂನಿಯರ್ ಕಾಲೇಜುಗಳು ಎಷ್ಟಿವೆ, ಅಲ್ಲಿ ಪಿಯುಸಿ ಪಾಸ್ ಮಾಡಿದ ವಿದ್ಯಾರ್ಥಿಗಳು ಡಿಗ್ರಿ ಕಾಲೇಜಿಗೆ ಬರುವುದಕ್ಕೆ ಅಲ್ಲಿ ಅವಕಾಶ ಇದೆಯೇ ಎಂದು ಸರ್ವೆ ಮಾಡಿದ ನಂತರ ಅಲ್ಲಿ ಅವಶ್ಯಕತೆ ಇದ್ದರೆ ಅಲ್ಲಿ ಹೊಸದಾಗಿ ಕಾಲೇಜುಗಳನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಆದರೆ ನೆಲಮಂಗಲದ ಬಗ್ಗೆ ಪ್ರಸ್ತಾವನೆಯನ್ನು ಕೈಗೆ ತೆಗೆದುಕೊಂಡಿಲ್ಲ. ಒಂದು ವೇಳೆ ಅವಶ್ಯಕತೆ ಇದೆ ಎಂದು ಹೇಳಿ ಕಂಡುಬಂದರೆ ಅಲ್ಲೂ ಕೂಡ ಪ್ರಾರಂಭ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಉಪಾಧ್ಯಾಯರುಗಳ ಕೊರತೆ ಇರುವ ಕಾಲೇಜುಗಳಲ್ಲಿ ಗ್ರಾಮೀಣ ಪ್ರದೇಶದ ಕಾಲೇಜುಗಳೆಷ್ಟು? ಗ್ರಾಮೀಣವೆಂದರೆ ಜಿಲ್ಲಾ ಕೇಂದ್ರ ಸ್ಥಾನ ಈ ರೀತಿಯಾಗಿರುವುದನ್ನು ಬಿಟ್ಟು ಗ್ರಾಮೀಣ ಪ್ರದೇಶದಲ್ಲಿರುವ ಕಾಲೇಜುಗಳು ಮತ್ತು ಪಟ್ಟಣ ಪ್ರದೇಶದಲ್ಲಿರುವ ಕಾಲೇಜುಗಳ ಬಗ್ಗೆ ತಾವೇನಾದರೂ ಅಂಕಿಅಂಶಗಳನ್ನು ಕೊಡುವುದಿದ್ದರೆ ಕೊಡಿ. 692 ಅಧ್ಯಾಪಕರ ಹುದ್ದೆಗಳು

ಖಾಲಿ ಇದೆ ಎಂದು ಹೇಳಿದ್ದೀರಿ. ಅದರಲ್ಲಿ 364 ಹುದ್ದೆಗಳನ್ನು ತುಂಬುವ ಪ್ರಯತ್ನ ಮಾಡಿದ್ದೀರಿ ಎಂದು ಹೇಳಿದ್ದೀರಿ. ಇದು ಎಂದಿನಿಂದ ಖಾಲಿ ಇದೆ. ನಮ್ಮ ಮಾಹಿತಿ ಪ್ರಕಾರ ಇದು ಅನೇಕ ವರ್ಷಗಳಿಂದ ಖಾಲಿ ಇರುವುದು. ಎಷ್ಟು ಅವಧಿಯಿಂದ ಇದು ಖಾಲಿ ಇದೆ ಎನ್ನುವ ಮಾಹಿತಿಯನ್ನು ಕೊಟ್ಟು ತಕ್ಷಣ ಇದಕ್ಕೇನಾದರೂ ಒಂದು ಕಾಲಮಿತಿಯನ್ನು ಹಾಕಿ ಇಷ್ಟರೊಳಗಾಗಿ ಇದನ್ನು ತುಂಬುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಯೇ ?

ಡಾ|| ಜಿ. ಪರಮೇಶ್ವರ್ : ಮಾನ್ಯ ಅಧ್ಯಕ್ಷರೆ, ಈ ಹುದ್ದೆಗಳು ಸುಮಾರು ಏಳೆಂಟು ವರ್ಷಗಳಿಂದಲೂ ಖಾಲಿ ಇವೆ. ತಾವು ಸರ್ಕಾರದಲ್ಲಿದ್ದಾಗಲೂ ಕೂಡ ಈ ಹುದ್ದೆಗಳು ಹಾಗೆ ಖಾಲಿ ಇವೆ. 1987 ರಿಂದೀಚೆಗೆ ಯಾವುದೇ ರೆಕ್ರೂಟ್‌ಮೆಂಟನ್ನು ಮಾಡಲಿಲ್ಲ. ಟೀಚರ್ಸ್ ರೆಕ್ರೂಟ್‌ಮೆಂಟ್, ನಾನ್ ಟೀಚರ್ಸ್ ರೆಕ್ರೂಟ್‌ಮೆಂಟ್‌ಗೆ ಬ್ಯಾನ್ ಇದ್ದ ಕಾರಣದಿಂದಾಗಿ ಆರ್ಥಿಕ ಮುಗ್ಗಟ್ಟು ಇರಬಹುದು, ಬೇರೆ ಬೇರೆ ಕಾರಣದಿಂದ ಬ್ಯಾನ್ ಮಾಡಿತ್ತು. ಅಲ್ಲಿಂದ ಇಲ್ಲಿಯವರೆಗೂ ಯಾವುದೇ ರೆಕ್ರೂಟ್‌ಮೆಂಟ್ ಆಗಲಿಲ್ಲ. ಈಗ ಅದನ್ನು ನಾವು ಗಣನೆಗೆ ತೆಗೆದುಕೊಂಡು ಎಲ್ಲೆಲ್ಲಿ ಹೆಚ್ಚು ಇದ್ದಾರೆ ಉದಾಹರಣೆಗೆ ಗುಲ್ಬರ್ಗಾ ಕಾಲೇಜಿನಲ್ಲಿ 17 ಜನ ಉಪಧ್ಯಾಯರುಗಳು ಹೆಚ್ಚಿದ್ದರು. ಅಲ್ಲಿ ವಿಧ್ಯಾರ್ಥಿಗಳ ಸಂಖ್ಯೆ ಕಡಿಮೆಯಾದದ್ದರಿಂದ 17 ಜನ ಶಿಕ್ಷಕರುಗಳು ಹೆಚ್ಚಿಗೆ ಇದ್ದರು. ಅವರನ್ನು ನಾವು ಎಲ್ಲಿ ಶಿಕ್ಷಕರು ಕಡಿಮೆ ಇದ್ದಾರೆ, ಅಲ್ಲಿ ರೀ-ಡಿಪ್ಲಾಯ್ ಮಾಡಿದ್ದೇವೆ. ಇದನ್ನು ಬರೀ ಸರ್ಕಾರಿ ಕಾಲೇಜಿನಲ್ಲಷ್ಟೇ ಅಲ್ಲ. ಪ್ರೈವೇಟ್ ಏಡೆಡ್ ಕಾಲೇಜಿನಲ್ಲಿ ಸರ್ಕಾರ ಎಲ್ಲಿ ಅನುದಾನವನ್ನು ಕೊಡುತ್ತಿದೆ, ಅಂಥ ಕಾಲೇಜಿನಲ್ಲೂ ಕೂಡ ಹೆಚ್ಚಿಗೆ ಇದ್ದವರನ್ನು ಸರ್ಕಾರಿ ಕಾಲೇಜಿಗೆ ಅವರನ್ನು ರೀಡಿಪ್ಲಾಯ್‌ಮೆಂಟ್ ಮಾಡಿ ಮಾಡುವಂಥ ಪ್ರಯತ್ನವನ್ನು ಮಾಡಿದ್ದೇವೆ. ಸುಮಾರು 400 ಕ್ಕೂ ಹೆಚ್ಚು ಜನ ಉಪಾಧ್ಯಾಯರನ್ನು ಆ ರೀತಿ ಪ್ರೈವೇಟ್ ಕಾಲೇಜಿನಿಂದ ಸರ್ಕಾರಿ ಕಾಲೇಜಿಗೆ ರೀಡಿಪ್ಲಾಯ್‌ಮೆಂಟ್ ಮಾಡುವ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗ ಅದರ ಜೊತೆಗೆ ನಾವೇನು 364 ಜನ ಉಪಾಧ್ಯಾಯರುಗಳನ್ನು ರೆಕ್ರೂಟ್‌ಮೆಂಟ್ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ, ಇದರಲ್ಲಿ ಬ್ಯಾಕ್‌ಲಾಗ್ ವೇಕೆನ್ಸಿ ಕೂಡ ಇವೆ. ಆದ್ದರಿಂದ ಇರುವ ಬ್ಯಾನನ್ನು ಲಿಫ್ಟ್ ಮಾಡಿ ಈ ಗ್ರಾಮೀಣ ಕೃಪಾಂಕದ ಗೊಂದಲವನ್ನು ಹೊರತುಪಡಿಸಿ ಯಾವುದಾದರೂ ರೂಪದಲ್ಲಿ ಮಾಡಬೇಕೆಂದು ಹೇಳಿ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ತಾವು ಕೇಳಿದ ಪ್ರಶ್ನೆ ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಖಾಲಿ ಇವೆ, ಮತ್ತು ಪಟ್ಟಣ ಪ್ರದೇಶದಲ್ಲಿ ಎಷ್ಟು ತುಂಬಿದ್ದಾರೆನ್ನುವುದು ಏನು ಇದೆ, ಅದನ್ನು ಗಮನಕ್ಕೆ ತೆಗೆದುಕೊಂಡು ಈ ಸಾರಿ ಟ್ರಾನ್ಸ್‌ಫರ್ಸ್ ಮಾಡುವಾಗ ಕೂಡ ಎಲ್ಲೆಲ್ಲಿ ರಿಕ್ವೈರ್‌ಮೆಂಟ್ ಇದೆ, ಅದನ್ನು ಆದಷ್ಟುಮಟ್ಟಿಗೆ ಮಾಡಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಸಿ. ಭೈರೇಗೌಡ : ಗ್ರಾಮೀಣ ಪ್ರದೇಶದಲ್ಲಿ ಕೇವಲ ಕೆಲವು ಬೆರಳೆಣಿಕೆಯಷ್ಟು ಉಪಾಧ್ಯಾಯರುಗಳು ಇಲ್ಲ. ಉಪಾಧ್ಯಾಯರುಗಳು ಇಲ್ಲದೆ ಕಾಲೇಜನ್ನು ನಡೆಸುತ್ತೇವೆಂದರೆ ಅದಕ್ಕಿಂತ ಮುಚ್ಚುವುದು ವಾಸಿ. ಬೇರೆ ಕಡೆ ಅವ್ಯವಸ್ಥೆ ಇದ್ದರೂ ಸಹ, ತೊಂದರೆ ಇದ್ದರೂ ಅಲ್ಲಾದರೂ ಹೋಗಿ ಕಲಿಯುತ್ತಾರೆ. ಉಪಾಧ್ಯಾಯರುಗಳು ಇಲ್ಲದೇ ಇರುವ ಕಾಲೇಜುಗಳು ಸಾಕಷ್ಟು ಇವೆ. ಅದರಿಂದಾಗಿ ನಾನು ಈ ಪ್ರಶ್ನೆಯನ್ನು ಒತ್ತಿ ಕೇಳುತ್ತಿರುವುದು. ದಯವಿಟ್ಟು ತಾವು ಇದರ ಬಗ್ಗೆ ಉಪಾಧ್ಯಾಯರ ಮರ್ಜಿಗೇ ಬಿಡಬೇಡಿ. ಅಲ್ಲಿಗೆ ಅವರು ಹೋಗದಿದ್ದರೆ ಶಿಸ್ತಿನ ಕ್ರಮ ತೆಗೆದುಕೊಳ್ಳಿ. ಆ ಗ್ರಾಮೀಣ

ಪ್ರದೇಶದಲ್ಲಿರುವ ಮಕ್ಕಳುಗಳು ಹಾಳಾಗಿ ಹೋಗುತ್ತಿದ್ದಾರೆ. ಇದರ ಬಗ್ಗೆ ತೀವ್ರವಾದ ಗಮನವನ್ನು ತೆಗೆದುಕೊಳ್ಳಿ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ನಮ್ಮ ಕಾಪು ಕ್ಷೇತ್ರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೂರು ಜನ ಕಾಮರ್ಸ್ ಲೆಕ್ಚರರ್ಸಗಳನ್ನು ಪೋಸ್ಟಿಂಗ್ ಮಾಡಿದ್ದರು. ಕೇವಲ ಏಳು ದಿವಸಗಳಲ್ಲಿ ಅವರನ್ನು ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ಏನು ಕಾರಣವಿದೆ? ಯಾರ ಶಿಫಾರಸ್ಸಿನ ಮೇಲೆ ಅವರನ್ನು ವರ್ಗ ಮಾಡಿದ್ದಾರೆ? ನಮ್ಮದು ಕೂಡ ಗ್ರಾಮೀಣ ಪ್ರದೇಶದ ಒಂದು ಕಾಲೇಜು. ಅಲ್ಲಿ ಕಾಮರ್ಸ್‌ಗೆ ಒಬ್ಬರೂ ಲೆಕ್ಚರರ್ಸ್ ಇಲ್ಲದ ಪರಿಸ್ಥಿತಿಯಲ್ಲಿ, ಯಾವ ಆದೇಶದ ಮೇರೆಗೆ ಮಾನ್ಯ ಮಂತ್ರಿಗಳು ಅವರನ್ನು ಏಳು ದಿವಸಗಳಲ್ಲಿ ವರ್ಗ ಮಾಡಿದ್ದಾರೆ?

ಅಧ್ಯಕ್ಷರು : ಮಾನ್ಯ ವಸಂತ ಸಾಲಿಯಾನ್‌ರವರೇ, ಇದನ್ನು ಅವರ ಛೇಂಬರ್ಸ್‌ಗೆ ಹೋಗಿ ಚರ್ಚೆ ಮಾಡಿ.

ಶ್ರೀ ವಸಂತ ವಿ. ಸಾಲಿಯನ್ : ಅಲ್ಲಿ ಪಾಠವೇ ನಡೆಯುತ್ತಿಲ್ಲ. ಕಾಮರ್ಸ್ ಲೆಕ್ಚರರ್ಸೇ ಇಲ್ಲ. ನಾವೇನು ಮಾಡುವುದಕ್ಕಾಗುತ್ತೆ?

ಅಧ್ಯಕ್ಷರು : ಆ ರೀತಿ ವಿವರಗಳು ಬೇಕಾಗಿದ್ದರೆ ಮಾನ್ಯ ಮಂತ್ರಿಗಳ ಛೇಂಬರ್ಸ್‌ಗೆ ಹೋಗಿ ಚರ್ಚೆ ಮಾಡಿ.

ಶ್ರೀ ವಸಂತ ವಿ. ಸಾಲಿಯಾನ್ : ಮಾನ್ಯ ಮಂತ್ರಿಗಳಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ಈ ಕೂಡಲೇ ಅಲ್ಲಿಗೆ ಇಬ್ಬರು ಲೆಕ್ಚರರ್‌ಗಳನ್ನಾದರೂ ಹಾಕಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ತಾವೇ ಮಂತ್ರಿಗಳ ಛೇಂಬರ್ಸ್‌ಗೆ ಹೋಗಿ ಚರ್ಚೆ ಮಾಡಿ ಎಂದರೆ ನಾವೇನು ಮಾಡುವುದು? ವರ್ಗಾವರ್ಗಿ ವಿಚಾರ ಎಲ್ಲಾ ಇಲಾಖೆಗಳಲ್ಲಿ ರಾಜ್ಯದ ತುಂಬಾ ನಡೆದಿದೆ. ಅವರ ಇಲಾಖೆಯ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ತಾವು ಅವರ ಛೇಂಬರ್‌ಗೆ ಹೋಗಿ ಮಾತನಾಡಿ ಎಂದರೆ ಹೇಗೆ? ದಯವಿಟ್ಟು ಇದರ ಬಗ್ಗೆ ಇಲ್ಲೇ ಚರ್ಚೆಯಾಗಬೇಕು. ತಾವು ಬೇಕಾದರೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶದಲ್ಲಿ ಇವತ್ತಿನ ದಿವಸ ಉಪಾಧ್ಯಾಯರುಗಳು ಇಲ್ಲ ಎಂದು ಹೇಳಿದ್ದಾರೆ.

ಅಧ್ಯಕ್ಷರು : ಸಪ್ಲಿಮೆಂಟರಿಯನ್ನು ನೀವೊಬ್ಬರು ಮೂರು ಸಾರಿ ಕೇಳಿದರೆ ಹೇಗೆ?

ಶ್ರೀ ಸಿ. ಭೈರೇಗೌಡ : ನಾನು ಪೇಳಿರತಕ್ಕಂಥಾದ್ದು ಇಲ್ಲೇ ಸಾಬೀತಾಗುತ್ತಿದೆ. ಮಾನ್ಯ ಸದಸ್ಯರಾದ ಸಾಲಿಯಾನರವರು ಹೇಳಿದ ಹಾಗೆ ಅಲ್ಲೂ ಕೂಡ ಉಪಾಧ್ಯಾಯರುಗಳು ಇಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಇನ್ನು 10 ನಿಮೀಷ ಉಳಿದಿದೆ 8 ಪ್ರಶ್ನೆಗಳಿವೆ. ಇನ್ನು ಹತ್ತು ನಿಮಿಷದಲ್ಲಿ ಹೇಗೆ ಕಂಪ್ಲೀಟ್ ಮಾಡುವುದಕ್ಕಾಗುತ್ತದೆ?

ಶ್ರೀ ಸಿ. ಭೈರೇಗೌಡ : ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟುಬಿಟ್ಟರೆ ಬೇಗನೆ ಮುಗಿದುಹೋಗುತ್ತದೆ.

ಶ್ರೀ ವಸಂತ ವಿ. ಸಾಲಿಯಾನ : ಅಲ್ಲಿಗೆ ಪೋಸ್ಟಿಂಗ್ ಮಾಡಿದ ಮೇಲೆ ಒಂದು ವಾರದಲ್ಲಿ ಏತಕ್ಕೆ ಟ್ರಾನ್ಸ್‌ಫರ್ ಮಾಡಿದ್ದಾರೆ?

ಡಾ|| ಜಿ. ಪರಮೇಶ್ವರ್ : ಸನ್ಮಾನ್ಯ ಅಧ್ಯಕ್ಷರೆ, ಯಾರ ಶಿಫಾರಸ್ಸಿನ ಮೇಲೆ ಮಾಡಿದರು ಯಾರ ಶಿಫಾರಸ್ಸಿನ ಮೇಲೆ ವಾಪಸ್ ಕರೆಸಿಕೊಂಡರು, ಅದನ್ನೆಲ್ಲಾ ಇಲ್ಲಿ ಚರ್ಚೆ ಮಾಡುವ ವಿಷಯವಲ್ಲ. ಅದೆಲ್ಲಾ ಹೇಳಿದರೆ ಬೇರೆ ಬೇರೆ ಹಂತಕ್ಕೇ ಹೋಗುತ್ತದೆ.

ಅಧ್ಯಕ್ಷರು : ಅದಕ್ಕೋಸ್ಕರವೇ ನಾನು ಹೇಳಿದ್ದು. ಅವೆಲ್ಲವನ್ನೂ ಛೇಂಬರ್ಸ್‌ಗೆ ಹೋಗಿ ಚರ್ಚೆ ಮಾಡಿ ಎಂದು.

ಡಾ|| ಜಿ. ಪರಮೇಶ್ವರ್ : ನಾನು ಹೇಳುವುದೇನೆಂದರೆ ನಿಮ್ಮಲ್ಲಿ ಕಾಮರ್ಸ್ ಟೀಚರ್ಸ್ ಬಹಳ ಕಡಿಮೆ ಇದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅದಕ್ಕಾಗಿ ನಾವು ಛೇಂಬರ್ಸ್‌ಗೆ ಏಕೆ ಹೋಗಬೇಕು?

ಅಧ್ಯಕ್ಷರು : ಅದಕ್ಕೋಸ್ಕರ ಅರ್ಧ ಗಂಟೆ ಚರ್ಚೆಗೆ ಕಳುಹಿಸಿ.

ಶ್ರೀ ಎಸ್.ಎಸ್. ಪಾಟೀಲ್ : ಅದು ಅಸೆಂಬ್ಲಿಯಲ್ಲೇ ಚರ್ಚೆಯಾಗಬೇಕು.

ಅಧ್ಯಕ್ಷರು : ಮುಖ್ಯ ಪ್ರಶ್ನೆಯನ್ನು ಯಾರು ಕಳುಹಿಸಿದ್ದಾರೋ, ಅವರು ಅರ್ಧ ಗಂಟೆ ಚರ್ಚೆಗೆ ಬೇಕಾದರೆ ಹಾಕಲಿ ಪ್ರಶ್ನೋತ್ತರ ವೇಳೆಯಾದ್ದರಿಂದ ಕಷ್ಟವಾಗುತ್ತದೆ. ಅರ್ಧಗಂಟೆ ಚರ್ಚೆ ಬೇಕಾದರೆ ಇಟ್ಟುಕೊಳ್ಳೋಣ.

ಡಾ|| ಜಿ. ಪರಮೇಶ್ವರ್ : ಪಾರ್ಟ್ ಟೈಮ್‌ನಲ್ಲೂ ಕೂಡ ರೆಕ್ರೂಟ್ ಮಾಡಿಕೊಳ್ಳುವುದಕ್ಕೂ ನಾವು ಪ್ರಿನ್ಸಿಪಾಲರಿಗೆ ಅವಕಾಶವನ್ನು ಕೊಟ್ಟಿದ್ದೇವೆ. ಕಾಮರ್ಸ್‌ಗೆ ಟೀಚರ್ಸ್ ಕೊರತೆ ಬಹಳ ಕಡಿಮೆ ಇದೆ. ಅದಕ್ಕೋಸ್ಕರ ನಾವು ವಿತ್‌ಡ್ರಾ ಮಾಡಿದ್ದೇವೆಯೇ ವಿನಃ ಬೇರೆ ಕಾರಣದಿಂದ ಮಾಡಿರುವುದಿಲ್ಲ. ಒಂದೇ ಕಾಲೇಜಿಗೆ ಮೂರು ಜನ ಕಾಮರ್ಸ್ ಲೆಕ್ಚರ್‌ಗಳನ್ನು ಹಾಕುವುದಕ್ಕಾಗುವುದಿಲ್ಲ, ಕಡಿಮೆ ಇದೆ ಎಂದು ಹೇಳಿ ನಾವು ವಿತ್‌ಡ್ರಾ ಮಾಡಿದ್ದೇವೆ. ಪಾರ್ಟ್ ಟೈಮ್‌ನಲ್ಲಿ ಅವರು ಅಪಾಯಿಂಟ್ ಮಾಡಿಕೊಳ್ಳುವುದಕ್ಕೆ ಪರ್ಮಿಷನ್ ಕೊಟ್ಟಿದ್ದೇವೆ. ಅದಕ್ಕೆ ಸರ್ಕಾರ ಹಣ ಕೊಡುತ್ತದೆ. ಆದ್ದರಿಂದ ಆ ಗೊಂದಲ ಏನೂ ಆಗುವುದಿಲ್ಲ. ಮತ್ತೆ ಪಾಟೀಲರು ಹೇಳುವ ಮಾತೇನು ಇದೆ, ಎಲ್ಲಾ ಇಲಾಖೆಗಳಲ್ಲಿ ಅವ್ಯವಹಾರವಾಗಿದೆ ಎಂದು ಜನರಲೈಜ್ ಮಾಡುವುದಕ್ಕೆ ಹೋಗಬೇಡಿ. ಎಲ್ಲಾ ಇಲಾಖೆ ಎಂದು ಹೇಳಿದರೆ ಏನರ್ಥ? ಹೇಳುವಾಗ ಸರಿಯಾಗಿ ಹೇಳಬೇಕು ಸ್ವಾಮಿ. ತಾವು ಹಿರಿಯ ಸಚಿವರಿದ್ದೀರಿ. ಹಿರಿಯ ಸದಸ್ಯರಾಗಿ ತಾವು ಎಲ್ಲಾ ಇಲಾಖೆ ಎಂದು ಹೇಳಿ ಏಕೆ ಜನರಲೈಜ್ ಮಾಡುತ್ತೀರಿ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿರುವ ಸರ್ಕಾರಿ ಕಾಲೇಜುಗಳ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳು ಹೇಳಬೇಕಾಗುತ್ತದೆ, ಸರ್ಕಾರಿ ಕಾಲೇಜಿನ ಪರಿಸ್ಥಿತಿ ಬೆಂಗಳೂರಿನಲ್ಲಿ ಏನಾಗಿದೆ ಎಂದು ಹೇಳಬೇಕು.

ಅಧ್ಯಕ್ಷರು : ನೀವು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿ. ಬೇರೆ ರೂಪದಲ್ಲಿ ಅದನ್ನು ತೆಗೆದುಕೊಳ್ಳೋಣ. ಅಷ್ಟೊಂದು ಮುಖ್ಯವಾಗಿದ್ದಿದ್ದರೆ ನೀವು ಪ್ರಶ್ನೆ ಕಳುಹಿಸಬೇಕಾಗಿತ್ತು. ಮುಂದಿನ ಪ್ರಶ್ನೆ ಶ್ರೀ ಶಿವಾನಂದ ಪಾಟೀಲರು ಕೇಳಬೇಕು.

ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ

412 - ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ಒದಗಿಸಲಾದ ನೆದರ್‌ಲ್ಯಾಂಡ್ ಕುಡಿಯುವ ನೀರಿನ ಯೋಜನೆಯು ಇದುವರೆಗೆ ಮುಗಿಯದಿರಲು ಕಾರಣವೇನು?

ಆ) ಪ್ರಗತಿಯು ಯಾವ ಹಂತದಲ್ಲಿದೆ, ಇದಕ್ಕಾಗಿ ಇಲ್ಲಿಯವರೆಗೂ ಮಾಡಿದ ಖರ್ಚಿನ ವಿವರ ಒದಗಿಸುವುದು

ಇ) ಈ ಯೋಜನೆಯ ಕಾಮಗಾರಿಗಳ ಗುಣಮಟ್ಟವನ್ನು ಸರ್ಕಾರ ಪರಿಶೀಲಿಸಿದೆಯೆ?

ಈ) ಈ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ಒದಗಿಸಲಾದ ನೆದರ್‌ಲ್ಯಾಂಡ್ ಕುಡಿಯುವ ನೀರಿನ ಯೋಜನೆಯು ಅಕ್ಟೋಬರ್ 1999ರಲ್ಲಿ ಮುಗಿದಿರುತ್ತದೆ.

ಆ) ಕಾಮಗಾರಿಯು ಅಕ್ಟೋಬರ್ 1999ರಲ್ಲಿ ಮುಗಿದಿರುತ್ತದೆ. ಅದಕ್ಕೆ ತಗುಲಿದ ವೆಚ್ಚ ರೂ.198.00 ಲಕ್ಷಗಳು.

ಇ) ಹೌದು.

ಈ) ಈ ಮೇಲೆ ನಮೂದಿಸಿರುವಂತೆ ಯೋಜನೆಯು ಅಕ್ಟೋಬರ್ 1999ರಲ್ಲಿ ಪೂರ್ಣಗೊಂಡಿರುತ್ತದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈ ನೆದರ್‌ಲ್ಯಾಂಡ್ ಯೋಜನೆಯಲ್ಲಿ ಬಿಜಾಪುರ ತಾಲ್ಲೂಕಿನ ಬಬಲೇಶ್ವರ ಗ್ರಾಮದಲ್ಲಿ ಒಂದು ಕುಡಿಯವ ನೀರಿನ ಯೋಜನೆಯನ್ನು ಕೈಗೊಂಡಿದ್ದೆವು. ಅದು ಪೂರ್ಣವಾಗಿದೆ ಎಂದು ಅಕ್ಟೋಬರ್ 1999ರಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಅಕ್ಟೋಬರ್1999ರಿಂದ ಅವರು ಎಷ್ಟು ನೀರನ್ನು